ದಿನಾಂಕ: 15-04-2015

ಜಂಟಿ ನಿರ್ದೇಶಕರು

ಕಾಲೇಜು ಶಿಕ್ಷಣ ಇಲಾಖೆ

ಪ್ರಾದೇಶಿಕ ಕಛೇರಿ, ಮಂಗಳೂರು

ಮಾನ್ಯರೆ,

**ವಿಷಯ: ಆಯ್ಕೆ ವೇತನ ಶ್ರೇಣಿಯಲ್ಲಿ 03 ವರ್ಷಗಳ ಸೇವಾವಧಿಯನ್ನು ಪೂರೈಸಿರುವ ಉಪನ್ಯಾಸಕರಿಗೆ ಸ್ಥಾನೀಕರಣ ನೀಡಿ ಸಹ ಪ್ರಾಧ್ಯಾಪಕರ ವೇತನ ಶ್ರೇಣಿ ರೂ 37400–67000 ಮತ್ತು ಎಜಿಪಿ ರೂ.9000/ ನಿಗದಿ ಪಡಿಸುವ ಬಗ್ಗೆ**

ಉಲ್ಲೇಖ:

1. ಸರ್ಕಾರಿ ಆದೇಶ ಸಂಖ್ಯೆ:ಇಡಿ 37 ಯುಎನ್ ಇ 2009 ದಿನಾಂಕ: 24–12–2009
2. ಉನ್ನತ ಶಿಕ್ಷಣ ಇಲಾಖೆ ಪ್ರಧಾನ ಕಾರ್ಯದರ್ಶಿಯವರ ಪತ್ರ ಸಂಖ್ಯೆ:ಇಡಿ 49 ಡಿಸಿಇ 2014 ದಿನಾಂಕ:14–01–2015
3. ಕಾಲೇಜು ಶಿಕ್ಷಣ ಇಲಾಖೆಯಿಂದ ಮಹಾ ಲೇಖಪಾಲರು (ಎ ಮತ್ತು ಇ) ಪತ್ರ:ಕಾಶಿಇ/31/ಸ್ಥಾಮಾ/2013–13 ಬಸ್ಥಾವಿ ದಿನಾಂಕ:
4. ಸುತ್ತೋಲೆ:ಕಾಶಿಇ:ಪ್ರಾಕಮ:13:ಸ್ಥಾನೀಕರಣ:ಪದೋನ್ನತಿ:2011–12 ದಿನಾಂಕ: 15–02–2012
5. ಸರ್ಕಾರದ ಆದೇಶ ಸಂಖ್ಯೆ: ಇಡಿ:359:ಯುಎನ್ಇ 2011 ದಿನಾಂಕ: 05–01–2012
6. **ಆಯುಕ್ತರು ಇವರ ಪತ್ರ ಸಂಖ್ಯೆ:ಕಾಶಿಇ:27:ಸಿಎಎಸ್:2010–11 ಬಸ್ಥಾವಿ ದಿನಾಂಕ:02–02–2012**
7. ಸರ್ಕಾರಿ ಆದೇಶ ಸಂಖ್ಯೆ:ಇಡಿ 382 ಯುಎನ್ಇ 2012, ಬೆಂಗಳೂರು ದಿನಾಂಕ: 25–09–2014
8. MHRD Letter No:1-36/2009-U.II Dated:26-08-2010
9. MRRD letter No. 1-36/2009-U-II dated 23-08-2010

ರಾಜ್ಯದಲ್ಲಿ 1–1–2006 ರಿಂದ ಅನ್ವಯವಾಗುವಂತೆ ಪರಿಷ್ಕೃತ ಯುಜಿಸಿ ವೇತನ ಜಾರಿಗೊಳಿಸಲಾಗಿದೆ. ಉಲ್ಲೇಖಿತ (6) ಆದೇಶದಂತೆ 30–08–2010 ರವರೆಗೆ ಹಿರಿಯ/ಆಯ್ಕೆ ವೇತನ ಶ್ರೇಣಿ ಸ್ಥಾನೀಕರಣ ಸೌಲಭ್ಯವನ್ನು, API ಪ್ರಕ್ರಿಯೆಯನ್ನು ಅನುಸರಿಸದೇ ನೀಡಬಹುದೆಂದು, ಕಾಲೇಜು ಶಿಕ್ಷಣ ಇಲಾಖೆ ಆಯುಕ್ತರ ಸ್ಪಷ್ಟೀಕರಣದ ಆಧಾರದ ಮೇಲೆ ಪ್ರಸ್ತಾವನೆಗಳನ್ನು ಕಳುಹಿಸುವಂತೆ ತಿಳಿಸಿ ಸ್ಥಾನೀಕರಣ ನೀಡಲಾಗಿದೆ. ಪ್ರಮುಖವಾಗಿ API ಮಾನದಂಡವನ್ನು ಯುಜಿಸಿ ಮಾರ್ಗಸೂಚಿಯಂತೆ ರಾಜ್ಯದ ಪರಿಸ್ಥಿತಿಗೆ ಹೊಂದಾಣಿಕೆ ಮಾಡಿ ಜಾರಿಗೊಳಿಸಲು

amuct.org

ಸಮಯ ಬೇಕಾಗಬಹುದು ಎನ್ನುವ ಹಿನ್ನೆಲೆಯಲ್ಲಿ ಈ ಪ್ರಕ್ರಿಯೆ ಅನುಸರಿಸಲಾಗಿತ್ತು. ಸ್ಥಾನೀಕರಣ ಸೌಲಭ್ಯದ ಬಗ್ಗೆ ಕೇಂದ್ರ ಮಾನವ ಸಂಪನ್ಮೂಲ ಇಲಾಖೆ ಯುಜಿಸಿಗೆ 26–08–2010 ರ (ಉಲ್ಲೇಖ–8) ಪತ್ರದಲ್ಲಿ ಸ್ಪಷ್ಟನೆ ನೀಡಿದ್ದರೂ ರಾಜ್ಯದ ಪರಿಸ್ಥಿತಿಗೆ ಅನುಗುಣವಾಗಿ 30–08–2010 ರೊಳಗೆ SSL/SGL ಗೆ ಅರ್ಹರಿದ್ದಲ್ಲಿ API ವಿನಾಯತಿ ನೀಡಿ ಸ್ಥಾನೀಕರಣ ನೀಡಲಾಗಿತ್ತು. ನಂತರ **ಆಯ್ಕೆ ವೇತನ ಶ್ರೇಣಿಯಲ್ಲಿ 03 ವರ್ಷಗಳ ಸೇವಾವಧಿಯನ್ನು ಪೂರೈಸಿರುವ ಉಪನ್ಯಾಸಕರಿಗೆ ಸಹಪ್ರಾಧ್ಯಾಪಕರ ವೇತನ ಶ್ರೇಣಿ ರೂ 37400–67000 ಮತ್ತು ಎಜಿಪಿ ರೂ.9000/ ನಿಗದಿ ಪಡಿಸಲಾಗಿತ್ತು.** ರಾಜ್ಯದ ಮಹಾಲೇಖಪಾಲರು (ಎ ಮತ್ತು ಇ) G E I V A, ಇದನ್ನು ಅಂಗೀಕರಿಸಿರುತ್ತಾರೆ.

ಈ ಎಲ್ಲಾ ಪ್ರಕ್ರಿಯೆಗಳು ಮುಗಿದು ನಾಲ್ಕು ವರ್ಷಗಳ ನಂತರ ಮತ್ತೆ ಸರ್ಕಾರಿ ಆದೇಶ ವನ್ನು ಉಲ್ಲೇಖ (ಉಲ್ಲೇಖ:7) ಮಾಡಿ ಈಗಾಗಲೇ ಸ್ಥಾನೀಕರಣ ಸೌಲಭ್ಯ ಪಡೆದುಕೊಂಡಿರುವ ಉಪನ್ಯಾಸಕರ ವೇತನವನ್ನು ಮರುನಿಗದಿಪಡಿಸಲು ತೆಗೆದುಕೊಂಡಿರುವ ಇಲಾಖೆಯ ಕ್ರಮ ನ್ಯಾಯ ಸಮ್ಮತವಾಗಿರುವುದಿಲ್ಲ .

**ಈ ಕೆಳಗಿನ ಅಂಶಗಳನ್ನು ಗಮನಿಸಿದರೆ ಇಲಾಖಾ ಕ್ರಮ ತರ್ಕರಹಿತವಾಗಿದ್ದು ವೇತನ ಮರುನಿಗದಿಪಡಿಸುವ ಕ್ರಮವನ್ನು ಒಪ್ಪಲು ಸಾಧ್ಯವಿಲ್ಲ.**

- ಸಹಪ್ರಾಧ್ಯಾಪಕರ ವೇತನ ಶ್ರೇಣಿ ಸೌಲಭ್ಯ ಪಡೆದುಕೊಂಡಿರುವ ಉಪನ್ಯಾಸಕರುಗಳು ಸರಕಾರದ ಆದೇಶದಂತೆ ಪ್ರಸ್ತಾವನೆಗಳನ್ನು ಸಲ್ಲಿಸಿ ಇಲಾಖಾ ಮಟ್ಟದಲ್ಲಿ ಸಂಬಂಧಪಟ್ಟವರಿಂದ ಪರಿಶೀಲನೆಗೆ ಒಳಪಟ್ಟು ಈ ಸೌಲಭ್ಯವನ್ನು ನ್ಯಾಯಯುತವಾಗಿ ಪಡೆದಿರುತ್ತಾರೆ. ಈ ಬಗ್ಗೆ ಸರಕಾರಕ್ಕೆ ಯಾವುದೇ ತಪ್ಪು ಮಾಹಿತಿಯನ್ನು ನೀಡಿರುವುದಿಲ್ಲ.
- ಕೇಂದ್ರ ಮಾನವ ಸಂಪನ್ಮೂಲ ಇಲಾಖೆ 26–08–2010 ರಲ್ಲೇ ಸೂಚನೆ ನೀಡಿದಾಗ್ಯೂ ರಾಜ್ಯದ ಪರಿಸ್ಥಿತಿಗೆ ಅನುಗುಣವಾಗಿ ಈ ಸೌಲಭ್ಯ ನೀಡಲಾಗಿದೆ. ಒಂದು ವೇಳೆ API ಮಾನದಂಡ ಅನಿವಾರ್ಯವಾಗಿದ್ದಲ್ಲಿ ಆ ಕ್ರಮವನ್ನು ಆ ಸಂದರ್ಭದಲ್ಲೇ ಅನುಸರಿಸಬೇಕಿತ್ತು. ಇದೀಗ ಇಲಾಖಾ ಆಯುಕ್ತರ ಆದೇಶದ ಮೇಲೆ (ಉಲ್ಲೇಖ–6) ಕೈಗೊಳ್ಳಲಾಗಿರುವ ಕ್ರಮವನ್ನು ಅದೇ ಇಲಾಖೆ 3 ವರ್ಷದನಂತರ ಸರಿಯಲ್ಲ ಎಂದು ಹೇಳುತ್ತಿರುವುದು ನ್ಯಾಯಸಮ್ಮತವಾಗಿರುವುದಿಲ್ಲ.
- ಇಲಾಖೆಯ ಈ ಪ್ರಸ್ತಾವನೆಯನ್ನು ರಾಜ್ಯದ ಮಹಾಲೇಖಪಾಲರು (ಎ ಮತ್ತು ಇ) G E I V A, ಕಚೇರಿ ಯಾವುದೇ ಆಕ್ಷೇಪವಿಲ್ಲದೆ ಅಂಗೀಕರಿಸಿರುತ್ತಾರೆ.

amuct.org

- ಒಮ್ಮೆ ಸರ್ಕಾರ ತನ್ನದೇ ಆದೇಶದ ಪ್ರಕಾರ ಪ್ರಸ್ತಾನೆಗಳನ್ನು ಸ್ವೀಕರಿಸಿ, ನ್ಯಾಯಬದ್ಧವಾಗಿ ನೀಡಿರುವ ಸೌಲಭ್ಯವನ್ನು 3 ವರ್ಷಗಳ ನಂತರ ಹಿಂಪಡೆದು ವೇತನ ಮರುನಿಗದಿಪಡಿಸುವುದು ನ್ಯಾಯರಹಿತವಾಗಿದೆ. ಈ ಹಿಂದೆ ಇಂತಹ ಪ್ರಕರಣಗಳಲ್ಲಿ ವೇತನ ಮರುನಿಗದಿಪಡಿಸುವ ಸರ್ಕಾರದ ಕ್ರಮವನ್ನು ರಾಜ್ಯ ಉಚ್ಛ ನ್ಯಾಯಾಲಯ ತಿರಸ್ಕರಿಸಿದೆ.
- ಹಲವು ವರ್ಷಗಳ ನಂತರ ವೇತನ ಮರುನಿಗದಿಪಡಿಸುವ ಕ್ರಮದಿಂದ ಈಗಾಗಲೇ ಸೌಲಭ್ಯ ಪಡೆದು ತಮ್ಮ ಖರ್ಚುವೆಚ್ಚಗಳನ್ನು ಅದಕ್ಕೆ ಹೊಂದಾಣಿಸಿಕೊಂಡಿರುವ ಉಪನ್ಯಾಸಕರು ತೀವ್ರ ಆರ್ಥಿಕ ಹಾಗೂ ಮಾನಸಿಕ ತೊಂದರೆಗೊಳಗಾಗುತ್ತಾರೆ.
- ರಾಜ್ಯ ಒಕ್ಕೂಟ ಇಲಾಖೆಗೆ API ಮಾನದಂಡ ಅನುಸರಿಸಲು ಅನೇಕ ಬಾರಿ ಒತ್ತಾಯಿಸಿದ್ದು ಆ ಪ್ರಕಾರ ಇಲಾಖೆ ಒಂದು ತಜ್ಞರ ಸಮಿತಿ ರಚಿಸಿ, ಆ ಸಮಿತಿ ಕಾಲೇಜು ಗುಣಮಟ್ಟ ಹೆಚ್ಚಿಸುವ ದೃಷ್ಟಿಯಿಂದ ಯುಜಿಸಿ ಮಾರ್ಗಸೂಚಿಗಳನ್ನು ಅಧ್ಯಯನ ಮಾಡಿ ಅತ್ಯಂತ ವೈಜ್ಞಾನಿಕ ವರದಿಯೊಂದನ್ನು ಸಲ್ಲಿಸಿರುವುದನ್ನು ತಮ್ಮ ಗಮನಕ್ಕೆ ತರಬಯಸುತ್ತೇವೆ. ಈ ಬಗ್ಗೆ ಇಲಾಖೆ ತನ್ನ ಮೆಚ್ಚುಗೆ ವ್ಯಕ್ತಪಡಿಸಿರುವುದು ದಾಖಲಾಗಿದೆ. ಆದರೆ ಇಲ್ಲಿಯವರೆಗೆ ಈ ಬಗ್ಗೆ ಇಲಾಖೆಯು ಯಾವುದೇ ಸ್ಪಷ್ಟ ನಿರ್ಧಾರ ತೆಗೆದುಕೊಳ್ಳದಿರುವುದು ದುರದೃಷ್ಟಕರ.

ಈ ಮೇಲೆ ಉಲ್ಲೇಖಿಸಿರುವ ಅಂಶಗಳನ್ನು ಗಮನಿಸಿ ಈಗಾಗಲೇ ನೀಡಿರುವ ಸೌಲಭ್ಯವನ್ನು ಯಾವುದೇ ಕಾರಣಕ್ಕೂ ಹಿಂಪಡೆಯಬಾರದು. ವೇತನ ಮರು ನಿಗದಿಪಡಿಸುವ ಆದೇಶವನ್ನು ಈ ಕೂಡಲೇ ಹಿಂಪಡೆಯಬೇಕು. ಈ ನಿಟ್ಟಿನಲ್ಲಿ ಉಪನ್ಯಾಸಕರುಗಳಿಗೆ ಆಗಬಹುದಾದ ಅನ್ಯಾಯವನ್ನು ಸರಿಪಡಿಸಿಕೊಡಬೇಕಾಗಿ ತಮ್ಮಲ್ಲಿ ವಿನಂತಿ. **ಈಗಾಗಲೇ ನೀಡಿರುವ ಸೌಲಭ್ಯವನ್ನು ಮುಂದುವರೆಸಬೇಕು ಯಾವುದೇ ಕಾರಣಕ್ಕೂ ವೇತನ ಮರುನಿಗದಿಪಡಿಸುವ ಕ್ರಮವನ್ನು ಕೈ ಬಿಡಬೇಕು ಎಂದು ಅಮುಕ್ತ್ ಕೇಳಿಕೊಳ್ಳುತ್ತದೆ.**

ಅಧ್ಯಕ್ಷರು ಪ್ರಧಾನ ಕಾರ್ಯದರ್ಶಿ